

ಕೆ.ಎಲ್. ರಾಹುಲ್

ತಮಿಳುನಾಡು ವಿರುದ್ಧದ ಫೈನಲ್ ಪಂದ್ಯದಲ್ಲಿ ಕರುಣ್ 328 ಹಾಗೂ ರಾಹುಲ್ 188 ಕಲೆ ಹಾಕಿ ತೋರಿದ್ದ ಬ್ಯಾಟಿಂಗ್ ಸೊಗಸು ಸದಾ ನೆನಪಿನಲ್ಲಿ ಉಳಿಯುವಂತಿದೆ.

ಟೈಟನ್ಸ್ ತಂಡದ ಪ್ರಸಿದ್ಧ ಕೃಷ್ಣ 2018ರಲ್ಲಿ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದರು. 2022ರಲ್ಲಿ ಕೊನೆಯ ಬಾರಿಗೆ ಟೂರ್ನಿಯಲ್ಲಿ ಆಡಿದಾಗ ಒಂದೇ ಋತುವಿನಲ್ಲಿ 19 ವಿಕೆಟ್‌ಗಳನ್ನು ಪಡೆದು ಈ ಸಲ ಟೈಟನ್ಸ್ ತಂಡದಲ್ಲಿ ಅವಕಾಶ ಪಡೆದಿದ್ದಾರೆ. ಈ ಸಲದ ಟೂರ್ನಿಯಲ್ಲಿ ಆಡಿದ ಮೊದಲ ಎಂಟು ಪಂದ್ಯಗಳಿಂದ 16 ವಿಕೆಟ್‌ಗಳನ್ನು ಕಬಳಿಸಿದ್ದು, ಒಂದೇ ಪಂದ್ಯದಲ್ಲಿ ಮಹತ್ವದ ಸಮಯದಲ್ಲಿ ನಾಲ್ಕು ವಿಕೆಟ್‌ಗಳನ್ನು ಉರುಳಿಸಿ ತಂಡದ ಬೌಲಿಂಗ್ ಆಧಾರಸ್ತಂಭ ಎನಿಸಿದ್ದಾರೆ. ಬೆಂಗಳೂರಿನ ಬಲಗೈ ಮಧ್ಯಮ ವೇಗಿ ಪ್ರಸಿದ್ಧ 2018–19ರ ವಿಜಯ್ ಹಜಾರೆ ಟ್ರೋಫಿಯಲ್ಲಿ ಕರ್ನಾಟಕದ ಪರ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿದ್ದರು. ಏಳು ಪಂದ್ಯಗಳಿಂದ 13 ವಿಕೆಟ್ ಉರುಳಿಸಿದ್ದರು. ದೇಶಿ ಟೂರ್ನಿಗಳಲ್ಲಿ ತೋರಿದ ಬೌಲಿಂಗ್ ಕೈಚಳಕ ಐಪಿಎಲ್‌ನಲ್ಲಿ ಅವರಿಗೆ ಅವಕಾಶಗಳನ್ನು ತಂದುಕೊಟ್ಟಿದೆ.

2014ರಲ್ಲಿ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದ ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಮಧ್ಯಮ ಓವರ್‌ಗಳಲ್ಲಿ ವಿಕೆಟ್‌ಗಳನ್ನು ಉರುಳಿಸುವ ಕೌಶಲ ಹೊಂದಿದ್ದಾರೆ. ಹಿಂದೆ ವಿರಾಟ್ ಕೊಹ್ಲಿ, ಎ.ಬಿ. ಡಿವಿಲಿಯರ್ಸ್ ಮತ್ತು ಮರ್ಕಸ್ ಸ್ಟೋಯಿನಿಸ್ ಅವರಂಥ ದಿಗ್ಗಜ ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿ ಹ್ಯಾಟ್ರಿಕ್ ಸಾಧನೆ ಮಾಡಿದ ಗೌರವವೂ 31 ವರ್ಷದ ಶ್ರೇಯಸ್ ಹೊಂದಿದ್ದಾರೆ. ಈ ಸಲ ಚೆನ್ನೈ ತಂಡ ₹30 ಲಕ್ಷ ಮೂಲ ಬೆಲೆಗೆ ಖರೀದಿ ಮಾಡಿದ್ದರೂ ಚೆನ್ನೈ ಆಡಿರುವ ಆರಂಭದ ಎಂಟು ಪಂದ್ಯಗಳಲ್ಲಿ ಶ್ರೇಯಸ್‌ಗೆ ಅವಕಾಶ ಲಭಿಸಿಲ್ಲ.

ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಕೆ.ಎಲ್. ಶ್ರೀಜಿತ್ ಅವರನ್ನು ಮುಂಬೈ ಇಂಡಿಯನ್ಸ್ ತಂಡ ಮೊದಲ ಸಲ ಐಪಿಎಲ್ ತಂಡಕ್ಕೆ ಸೇರ್ಪಡೆ ಮಾಡಿಕೊಂಡಿದೆ. ಕಳೆದ ಆವೃತ್ತಿಯ ವಿಜಯ್ ಹಜಾರೆ ಟ್ರೋಫಿಯಲ್ಲಿ ನಡೆದ ಮುಂಬೈ ವಿರುದ್ಧದ ಪಂದ್ಯದಲ್ಲಿ ಶತಕ ದಾಖಲಿಸಿ ಕರ್ನಾಟಕ ತಂಡ ಟೂರ್ನಿಯ ಇತಿಹಾಸದಲ್ಲಿ ಎರಡನೇ ಗರಿಷ್ಠ ರನ್ ಗುರಿ ಮುಟ್ಟಲು ಶ್ರೀಜಿತ್ ನೆರವಾಗಿದ್ದರು.

ಕಿಂಗ್ಸ್ ಪಂಜಾಬ್ ತಂಡದ ಮೊದಲ ಎಂಟು ಪಂದ್ಯಗಳ ಅಂತ್ಯಕ್ಕೆ ಒಂದು ಪಂದ್ಯದಲ್ಲಷ್ಟೇ ವೈಶಾಕ್ ವಿಜಯಕುಮಾರ್ ಆಡಿದ್ದಾರೆ. ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಶಕ್ತಿ ತುಂಬಬಲ್ಲ ಸಾಮರ್ಥ್ಯ ಹೊಂದಿರುವ ಅಭಿನವ ಮನೋಹರ ರಾಜ್ಯದ ದೇಶಿ ಟೂರ್ನಿಗಳಲ್ಲಿ 150ರ ಸ್ಟ್ರೈಕ್ ರೇಟ್‌ನಲ್ಲಿ ರನ್ ಕಲೆ ಹಾಕಿದ್ದಾರೆ. 2022ರಲ್ಲಿ ಗುಜರಾತ್ ಟೈಟನ್ಸ್ ತಂಡದಲ್ಲಿದ್ದರು. ಈ ಸಲ ಹೈದರಾಬಾದ್ ತಂಡ ₹3.20 ಕೋಟಿಗೆ ಅವರನ್ನು ಖರೀದಿಸಿದೆ. ಆಲ್‌ರೌಂಡರ್ ಮನ್ವಂತ್ ಕುಮಾರ ಎಲ್., ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಲವನಿತ್ ಸಿಸೋಡಿಯಾ ಟೂರ್ನಿಯಲ್ಲಿದ್ದಾರೆ.

ತವರಿನ ತಂಡ ಆರ್‌ಸಿಬಿಯಲ್ಲಿರುವ ದೇವದತ್ ಪಡಿಕ್ಕಲ್ ಪ್ರದರ್ಶನ ಮೆಚ್ಚುವಂತಿದೆ. ಈ ಋತುವಿನಲ್ಲಿ ಆಡಿದ ಮೊದಲ ಏಳು ಪಂದ್ಯಗಳಿಂದ ಒಂದು ಅರ್ಧಶತಕ ಸೇರಿ ಒಟ್ಟು 180 ರನ್ ಗಳಿಸಿದ್ದಾರೆ. 2020ರ ಐಪಿಎಲ್‌ನಲ್ಲಿ ದೇವದತ್ ಒಟ್ಟು 473 ರನ್‌ಗಳನ್ನು ಗಳಿಸಿ ಭರವಸೆಯ ಆಟಗಾರ ಪ್ರಶಸ್ತಿ ಪಡೆದಿದ್ದರು. ಆಗ ರಾಜಸ್ಥಾನ ರಾಯಲ್ಸ್ ವಿರುದ್ಧದ ಪಂದ್ಯದಲ್ಲಿ ಕೇವಲ 52 ಎಸೆತಗಳಲ್ಲಿ ಔಟಾಗದೆ 101 ರನ್ ಹೊಡೆದಿದ್ದರು. ಇದೇ ತಂಡದಲ್ಲಿರುವ ಇನ್ನೊಬ್ಬ ಆಟಗಾರ ಮನೋಜ್ ಭಾಂಡಗೆ ಅವಕಾಶಕ್ಕಾಗಿ 'ಬೆಂಚ್' ಕಾಯುತ್ತಿದ್ದಾರೆ.

ಫ್ರಾಂಚೈಸ್‌ಗಳ ಆಧಾರಿತವಾದ ಐಪಿಎಲ್ ಟೂರ್ನಿಯಲ್ಲಿ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದಲ್ಲಿ ರಾಜ್ಯದ ಹೆಚ್ಚಿನ ಆಟಗಾರರೂ ಇರಬೇಕು ಎನ್ನುವ ಅಭಿಮಾನಿಗಳ ಸಹಜ ಆಶಯ ಈಡೇರಿಲ್ಲ. ರಾಜ್ಯದ ಮಹಾರಾಜ ಟ್ರೋಫಿ ಟಿ–20 ಟೂರ್ನಿಯಲ್ಲಿ ಗಮನಸೆಳೆದಿರುವ ಮನ್ವಂತ್ ಕುಮಾರ ಎಲ್. (ಡೆಲ್ಲಿ ಕ್ಯಾಪಿಟಲ್ಸ್), ಪ್ರಸಿದ್ಧ ಕೃಷ್ಣ (ಗುಜರಾತ್ ಟೈಟನ್ಸ್), ಐಪಿಎಲ್ ಇತಿಹಾಸದಲ್ಲಿ ಶತಕ ಸಿಡಿಸಿದ ಭಾರತದ ಮೊದಲ ಆಟಗಾರ ಎನ್ನುವ ಹೆಗ್ಗಳಿಕೆ ಹೊಂದಿರುವ ಮನೀಷ್ ಪಾಂಡೆ (ಕೋಲ್ಕತ್ತ ನೈಟ್ ರೈಡರ್ಸ್), ಇದೇ ತಂಡದಲ್ಲಿ ಲವನಿತ್ ಸಿಸೋಡಿಯಾ, ಕೆ.ಎಲ್. ಶ್ರೀಜಿತ್ (ಮುಂಬೈ ಇಂಡಿಯನ್ಸ್), ಆಲ್‌ರೌಂಡರ್ ಶ್ರೇಯಸ್ ಗೋಪಾಲ್ (ಚೆನ್ನೈ ಸೂಪರ್ ಕಿಂಗ್ಸ್), ವೈಶಾಕ್ ವಿಜಯಕುಮಾರ್, ಪ್ರವೀಣ ದುಬೆ (ಪಂಜಾಬ್ ಕಿಂಗ್ಸ್), ದೇವದತ್ ಪಡಿಕ್ಕಲ್, ಮನೋಜ್ ಭಾಂಡಗೆ (ಆರ್‌ಸಿಬಿ), ಅಭಿನವ ಮನೋಹರ್ (ಸನ್‌ರೈಸರ್ಸ್ ಹೈದರಾಬಾದ್) ಹೀಗೆ ರಾಜ್ಯದ ಆಟಗಾರರು ಬೇರೆ ಬೇರೆ ತಂಡಗಳಲ್ಲಿ ಆಡುತ್ತಿದ್ದಾರೆ.

ದೇಶ, ವಿದೇಶಗಳ ದಿಗ್ಗಜ ಆಟಗಾರರು ಐಪಿಎಲ್‌ನಲ್ಲಿ ಅಬ್ಬರಿಸುತ್ತಿರುವ ಸಾಧನೆಯ ನಡುವೆಯೂ ವಿವಿಧ ತಂಡಗಳಲ್ಲಿ ರಾಜ್ಯದ ಭರವಸೆಯ ಆಟಗಾರರು ಅವಕಾಶಗಳನ್ನು ಪಡೆದು ಕೊಳ್ಳುತ್ತಿದ್ದಾರೆ. ಕ್ರಿಕೆಟ್ ಬದುಕಿನಲ್ಲಿ ಮತ್ತೊಂದು ಸಾಧನೆಯ ಏಣಿ ಏರುವ ಸ್ಪರ್ಧೆಯಲ್ಲಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in



ದೇವದತ್ ಪಡಿಕ್ಕಲ್